At Ranjit
From 2-8-46
RATNAVALI
ರತ್ನಮಾಲಾ — ಸುರೇಂದ್ರ
— ಪಾತ್ರವಹಿಸಿರುವ —
ರತ್ನಾವಳಿ

Regd. No. M 1299 SATYAVADI Founded 1917

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 29 ಸಂಚಿಕೆ 264] ಸೋಮವಾರ 5-8-46 [ಬಿಡಿ ಪ್ರತಿ 3 ಪೈ

At Opera
From 3-8-46
Bhakta Kalathi
ಹೊನ್ನಪ್ಪ ಭಾಗವತರ್, ತತಮಣಿ
ಕೃಷ್ಣಕ, ಮಧುರಂ
ಪಾತ್ರವಹಿಸಿರುವ
ಭಕ್ತಕಲಾತಿ

ಪ್ರೆ॥ ಟ್ರೂಮನ್ನರ ಪ್ರಾಣಕ್ಕೆ ಸಂಚುಕಾರವೇ

ಗಂಡಂದಿರಿಲ್ಲವಂತೆ

ಅಮೇರಿಕೆಯಲ್ಲಿ ಗಂಡಸರಿಗಿಂತ ಹೆಂಗಸರ ಸಂಖ್ಯೆಯು 60 ಲಕ್ಷಕ್ಕಿಂತ ಹೆಚ್ಚಿದ್ದು ಅವರಿಗೆ ಗಂಡಂದಿರು ಸಿಕ್ಕದ್ದರಿಂದ ಒಳ್ಳೇ ಪೇಚಿನಲ್ಲಿ ಸಿಕ್ಕಿರುವರೆಂದು ಸುದ್ದಿಯಿದೆ.

ಅಭಿನಂದನಾ ಸಭೆ

ಮೈಸೂರು ಆ 5 — ನಿನ್ನೆಯ ದಿವಸ ಸಂಜೆ ಶ್ರೀ ಒನಮಯ್ಯನವರ ಶಾಲೆಯು ಕಟ್ಟಡದಲ್ಲಿ ವೀರಶೈವ ಸನಾಜದವರು ಮಹಾಸ್ವಭುಗಳಿಂದ ಸ್ವಶಸ್ತಿಪತ್ರ ಪಡೆದ ಧರ್ಮರತ್ನಾಕರ ನಂದೀಶ್ವರನ್ನು ಮತ್ತು ಧರ್ಮ ಪ್ರವರ್ತಕರವರನ್ನು ಜಟ್ಟಿ ಪಂಮಶಿವ ಯೋಕ್ಷತೆಯಲ್ಲಿ ಅಭಿನಂದನಾಜೃಂಭಣೆಯಿಂದ ನೆರ

ಷಣವಾದನಂತರ ಧ
ಸೂಕ್ತವಾದ ಉತ್ತ

ರ್ತಕರು ಬ್ರಾಹ್ಮಣರಿಗೆ
ಕರಿಯು ಹೆಚ್ಚು ಹೆಚ್ಚಾಗಿ
ವುದೆಂದೂ ಪಬ್ಲಿಕ ಸರ್ವೀಸ್
ಸರು ಇತ್ತ ಕಡೆ ಗಮನವೀಯು
ದೂ ತಮ್ಮ ಉಜ್ವಲ ಭಾಷಣದ
ತಿಳಿಸಿದರು.

ಕಾಂಗ್ರೆಸ್ ಸಮಿತಿ

ಮೈಸೂರು— ಸ್ಥಳೀಯ ಕಾಂಗ್ರೆಸ್ ಸಮಿತಿಗೆ ಶ್ರೀ ಎಸ್. ಚನ್ನಯ್ಯನವರು ಅಧ್ಯಕ್ಷರಾಗಿಯೂ, ಶ್ರೀ ಬಿ. ನಾರಾಯಣಶಾಸ್ತ್ರಿಯವರು ಉಪಾಧ್ಯಕ್ಷರಾಗಿಯೂ, ಶ್ರೀ ನರಸಿಂಹಯ್ಯಂಗಾರ್ಯರು ಕಾರ್ಯದರ್ಶಿಗಳಾಗಿಯೂ, ಶ್ರೀ ಎಂ. ಆರ್. ಶ್ರೀನಿವಾಸನವರು ಖಜಾಂಚಿಯಾಗಿಯೂ ಆಯ್ಕೆಮಾಡಲ್ಪಟ್ಟಿರುತ್ತಾರೆ.

ಲಂಡನ್ ಆ. 3 — ಪ್ರಿನ್ಸ್ ಚಾರ್ಲ್ಸ್ ರವರ ಹುಟ್ಟು ಹಬ್ಬದ

ಟ್ರೂಮನ್ನರ ಪ್ರಾಣಕ್ಕೆ ಸಂಚುಕಾರವೇ

ನ್ಯೂಯಾರ್ಕ್ ಆ. 3 — ಪ್ರೆ॥ ಟ್ರೂಮನ್ನರ ಪ್ರಾಣಾಪಹಾರದ ಬಗ್ಗೆ ಬೆದರಿಕೆಯೊಡ್ಡುತ್ತಿರುವನೆಂಬ ಆಪಾದನೆ ಮೇಲೆ ಒಬ್ಬ ಹಿಡಿಯಲ್ಪಟ್ಟಿರುವುದಾಗಿ ವಾಷಿಂಗ್‌ಟನ್ನಿನ ಒಂದು ಸುದ್ದಿ.

ಕಾಕಿ ಬಟ್ಟೆ ಪತ್ತೆ

ಮದರಾಸು ಆ. 3 — ಕೆಲವು ದರ್ಜಿ ಅಂಗಡಿಗಳ ಮೇಲೆ ರಾತ್ರಿ ಧಾಳಿಮಾಡಲಾಗಿ ಅವರು ಸಿದ್ಧವಾದ ಉಡುಪು ತಯಾರಿಸಲು ಮುಚ್ಚಿಟ್ಟಿದ್ದ 23 ಥಾರ್ ಕಾಕಿ ಬಟ್ಟೆ ಸಿಕ್ಕಿದೆ.

ಖಾಸಗಿ ಮಂತ್ರಿಗಳು

ಗ್ವಾಲಿಯಾರ್ ಆ. 4 — ಇಬ್ಬರು ಖಾಸಗಿ ಮಂತ್ರಿಗಳನ್ನು ಮುಖ್ಯ ಶಾಖೆಗಳ ಆಡಳಿತ ವಹಿಸಿ ನೇಮಿಸಲು ಮಹಾರಾಜರು ನಿರ್ಧರಿಸಿರುವರು. ಬಿಕನೀರು ರಾಜರೂ ಅಲ್ಲಿ ಇಬ್ಬರು ಖಾಸಗಿ ಮಂತ್ರಿಗಳನ್ನು ನೇಮಿಸಿರುವರು.

ಸರ್ ಅಲಗಪ್ಪ ಚೆಟ್ಟಿಯಾರ

ಮದರಾಸು— ಡಾ॥ ಸರ್ ಅಲಗಪ್ಪ ಚೆಟ್ಟಿಯಾರರು ಸೆನೇಟು ಮೆಂಬರಾಗಿ ನಾಮಕರಣ ಮಾಡಲ್ಪಟ್ಟಿದ್ದಾರೆ.

ಅಲಹಾಬಾದು ಆ 4 — ಗಂಗಾ ಯಮುನಾ ನದಿಗಳ ಪ್ರವಾಹ ಹೆಚ್ಚಿದೆ, ಆದರೆ ಭಯಂಕರ ಸ್ಥಿತಿಗೆ 5 ಅಂಗುಲ ತಗ್ಗಿನಲ್ಲಿದೆ

ಕೈರೋ ಆ 3—1936 ರ ಆಂಗ್ಲೊ ಈಜಿಪ್ಟು ಒಪ್ಪಂದದ ಸಂಬಂಧದಲ್ಲಿ ಬ್ರಿಟಿಷರ ಹೊಸ ಸೂಚನೆಯ ಬಗ್ಗೆ ಈಜಿಪ್ಟಿನ ನಿರ್ಧಾರ ಅಲ್ಲಾಡಿಲ್ಲ.

ಕಲ್ಕತ್ತೆ ಆ. 3 — ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾದ ಭಾರತೀಯ ಕೆಲಸಗಾರರ ಸಂಘದವರು ನಿರ್ಧರಿಸಿದ ಮುಷ್ಕರದಂತೆ ಭಾರತದ ಎಲ್ಲಾ [illegible]

ಇಲಿಗಳ ಹಾವಳಿ

ಅಮೆರಿಕದಲ್ಲಿ ಈಚೆಗೆ ಒಂದು ವಿಚಿತ್ರವು ನಡೆಯಿತು. ರೈತನೊಬ್ಬನು ತನ್ನ ಹೊಲದಲ್ಲಿ ಕೆಲಸ ಮಾಡಿಕೊಂಡಿರಲು ಸವಿಾದಲ್ಲಿಯು ಹುಲ್ಲಿನ ಬಣವೆಯು ಮೇಲಿನಿಂದ ಒಂದು ಇಲಿಗಳ ಗುಂಪು ತನ್ನ ಮನೆಯ ಕಡೆಗೆ ಹೋಗುತ್ತಿರುವಿಕೆಯನ್ನು ಕಂಡು ಕೂಡಲೇ ಮನೆಗೆ ಹೋಗಿ ಆಹಾರ ಪದಾರ್ಥಗಳನ್ನೆಲ್ಲವನ್ನೂ ಚೆನ್ನಾಗಿ ಮುಚ್ಚಿಟ್ಟು ತಟ್ಟೆಗಳಲ್ಲಿ ವಿಷಮಿಶ್ರವಾದ ಪದಾರ್ಥಗಳನ್ನಿಟ್ಟು ಒಂದು ಉದ್ದವಾದ ಗಳವನ್ನೂ ತೆಗೆದುಕೊಂಡು ಹೊಂಚುಹಾಕಿಕೊಂಡಿದ್ದನು. ಆ ಇಲಿಗಳ ಗುಂಪು ಒಂದಲ್ಲ ಹತ್ತಲ್ಲ ನೂರಲ್ಲ 820 ಇಲಿಗಳು ಆ ರೈತನನ್ನಾಗಲಿ ಅವನ ಮಕ್ಕಳನ್ನಾಗಲಿ ನಾಯಿಯನ್ನಾಗಲಿ ಲಕ್ಷಿಸದೆ ಮನೆಯೊಳಕ್ಕೆ ಹೊಕ್ಕು ಆ ವಿಷ ಪದಾರ್ಥಗಳನ್ನು ಸೇವಿಸಿ ಮತ್ತಿನಿಂದ ಈ ಕಡೆಯಿಂದ ಆ ಕಡೆಗೂ ಆ ಕಡೆಯಿಂದ ಈ ಕಡೆಗೂ ಹೊರಳಾಡಲು ಪ್ರಾರಂಭಿಸಿದವು ಆಗ ಆ ರೈತನು ಅವುಗಳನ್ನೆಲ್ಲವನ್ನೂ ಕೊಂದು ಹಾಕಿದನು. ಈ ಬಗೆಯಲ್ಲಿ 820 ಇಲಿಗಳುಳ್ಳ ಮೂಷಕ ಸೈನ್ಯವು ಮನುಷ್ಯನ ಮೇಲೆ ದಂಡಯಾತ್ರೆ ಮಾಡಲು ಹೊರಟಿದ್ದು ಪ್ರಪಂಚ ಚರಿತ್ರೆಯಲ್ಲಿ ಇದೇ ಮೊದಲನೆಯ ಬಾರಿಯಾಗಿರಬಹುದೆಂದು ಅವರು ಅಭಿಪ್ರಾಯ ಪಟ್ಟಿರುವರು.

ಹೋಟೆಲ ಕೆಲಸಗಾರರ ಸಂಘ

ಬೊಂಬಾಯಿ ಆ. 1 — ಸಂಬಳ ನಿಶ್ಚಯಿಸಬೇಕು, ಪ್ರಾವಿಡಂಟ್ ಫಂಡ ಹಾಗು ರಜೆ ಗೊತ್ತು ಮಾಡಬೇಕು ಮೊದಲಾದ ಬೇಡಿಕೆಗಳನ್ನು ಮಾಡಿ ಅವು ಬೇಗನೇ ಪೂರೈಸದಿದ್ದರೆ; ಮುಂಬಯಿ ನಗರದಲ್ಲಿಯ ಸುಮಾರು 3500 ಹೋಟಲು ಕೆಲಸಗಾರರು ಸಂಘ ಹೂಡುವರೆಂದಾರೆಂದು ತಿಳಿಯುತ್ತದೆ. ತಾಜಮಹಾಲ ರಾಯಲ್ ಬಾಂಬೆ ಯಾಚ್ ಕ್ಲಬ್ ಮೊದಲಾದ ಹೋಟಲುಗಳು ಬಂದಾಗುವ ಸಂಭವವಿರುವುದು.

ಸಾಲಿಗೆಯನ್ನು ಕತ್ತರಿಸುವಿಕೆ

ವಸಂತಗಿರಿ ತೋಟದಲ್ಲಿ ವಾಸ ಮಾಡಿಕೊಂಡಿರುವ ಬಾಬಯ್ಯನೆಂಬ ಪಂಚಮ ಯುವಕನೊಬ್ಬನಿಗೆ ಯಾರೋ ಸಾಲಿಗೆಯನ್ನು ಕತ್ತರಿಸಿ ಹಾಕಿದರಂತೆ. ಆತನು ತಪ್ಪಾಲು ಆಫೀಸಿನ ಚಪ್ಪಾಸಿಯಾಗಿ ಕೆಲಸ ಮಾಡುತ್ತಾ ಎರಡು ದಿನಗಳು ಮನೆಗೆ ಬಾರದಿದ್ದುದರಿಂದ ಹುಡುಕಿದಾಗ ಈ ಕೆಲಸವು ನಡೆದಿರುವಿಕೆಯು ತಿಳಿಯು ಬಂದಿತು. ಬಾಧೆಯು ತಗ್ಗಿದನಂತರ ತಪ್ಪಿತಸ್ಥನು ಯಾರೊ ತಿಳಿಸುವದಾಗಿ ಸಂಜ್ಞೆ ಮಾಡಿದ್ದಾನೆ. ಚಿಕಿತ್ಸೆಯು ನಡೆಯುತ್ತಿದೆ.

ಪ್ಯಾರಿಸ್ ಆ. 2 — ಫ್ರೆಂಚ್ ಅಂಚೆ ಕೆಲಸಗಾರರು ಮುಷ್ಕರ ಹಿಡಿದಿರುವರು.

ಲಂಡನ್ ಆ. 2 — ಸರ್ ಕ್ರಿಪ್ಸ್‌ರವರು ಅಸ್ವಸ್ಥವಾಗಿದ್ದು 1 ತಿಂಗಳ ವಿಶ್ರಾಂತಿ ಅವಶ್ಯಕವೆಂದು ಡಾ॥ ಹೇಳುವರು.

ಜರೂಸೆಲಂ ಆ. 2 — ಟೆಲ್ ಅವಿವ್ ಉತ್ತರಕ್ಕೆ ರೈಲ್ವೆ ಲೈನು ಉದ್ಘಾಡಿಸಲ್ಪಟ್ಟಿದೆ.

ನವದೆಹಲಿ ಆ. 3 — ದ. ಪರ್ಷಿಯಾದಲ್ಲಿ ಬ್ರಿಟಿಷ್ ಮತ್ತು ಭಾರತೀಯ ಹಿತವನ್ನು ಕಾಪಾಡಲು ಬಾಸ್ರಾಕ್ಕೆ ಭಾರತ ಸೈನಿಕರು ಕಳುಹಿಸಲ್ಪಟ್ಟಿರುವರು.

ಪ್ಯೇಗ್ — ಗೋಬಲ್ಲಿನ ಮಿತ್ರಳಾಗಿದ ಚಲಚಿತ್ರ ತಾರೆ ಬಾರೋವಾಳು ವಿಚಾರಣೆಗೆ ಒಳಪಡಿಸಲ್ಪಟ್ಟಿದ್ದಾಳೆ.

ಬೊಂಬಾಯಿ ಆ 1 — ಬೊಂಬಾಯಿನಲ್ಲಿ ಹೊಡೆದಾಟದಲ್ಲಿ ಉಪಯೋಗಿಸಲಾಗುವ ಕತ್ತಿ, ಬಾಕು ಮುಂತಾದುವನ್ನು ಹಿಡಿದು ತಿರುಗಬಾರದೆಂದೂ ಕಲು ಶೇಖರಣೆ ಮತ್ತು ಹೊಡೆದಾಟದಲ್ಲಿ ಉಪಯೋಗಿಸುವುದು ಕೂಡದೆಂದೂ ಪೊ॥ ಕಮಿಷನರು ಆಜ್ಞೆ ಹೊರಡಿಸಿದ್ದಾರೆ.

ದ. ಆಫ್ರಿಕಾ ಸತ್ಯಾಗ್ರಹ

ಡರ್ಬಾ ಜು 31 — ಈ ದಿವಸ 5 ಮಂದಿ ಸತ್ಯಾಗ್ರಹಿಗಳಿಗೆ ಶಿಕ್ಷೆ ವಿಧಿಸಲಾಯಿತು. ಇಲ್ಲಿಯವರೆಗೆ ಒಟ್ಟು 307 ಸತ್ಯಾಗ್ರಹಿಗಳು ಬಂಧಿಸಲ್ಪಟ್ಟಿದ್ದಾರೆ.

||ವಂದೇಮಾತರಂ||

ಶ್ರೇಷ್ಠವಾದ

ರಾಜಪುರಿ ಹೊಗೇಸೊಪ್ಪಿನಿಂದ

— ತಯಾರಿಸಲ್ಪಟ್ಟ —

ಕಾಂಗ್ರೆಸ್

(ರಿಜಿಸ್ಟರ್ಡ್)

ಮಂಗಳೂರು

ಬೀಡಿಗಳು

ಜಿ. ಎಸ್. ಟೊಬ್ಯಾಕೊ ವರ್ಕ್ಸ್

ಬಸ್ ಟರ್ಮಿನಸ್ ಮೈಸೂರು

ಸತ್ಯವಾದಿ

ಸೋಮವಾರದ ಸಂಚಿಕೆ

ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1--12-0

ಚಳಿಜ್ವರಕ್ಕೆ

ಉಚಿತವಾಗಿ ಔಷಧವನ್ನು

ಕೊಡಲಾಗುವುದು.

ಆ ಶೋ ಕಾ ಫಾರ್ಮಸಿ

ಲ್ಯಾನ್ಸ್‌ಡೌನ್‌ಬಜಾರ್, ಮೈಸೂರು

ಅಕ್ಕರ ಸಾಮಾಜಿಕ

ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ವೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

Get Medical Diplomas

At home : — Ayurvedic Homeopathic, Unani, etc Prospectus Free.

Old Indian Medical College
Kotgarh, Simla

ಈ ವಾರದ ಭವಿಷ್ಯ

(ಓಂಜೋತ್ಸ್ನಿಷರಿಂದ)

ಮೇಷ— ಮನೋಸ್ಥಿತಿ ಕೆಟ್ಟಿರುತ್ತದೆ. ಹಣಕಾಸಿನ ಸ್ಥಿತಿ ಉತ್ತಮ.

ವೃಷಭ— ಸಂಸಾರ ಸಾಗರವು ದುಃಖದ ನೆಲೆಯೆಂಬುದು ಮನಸ್ಸಿಗೆ ಹತ್ತುವುದು. ಖರ್ಚು ಹೆಚ್ಚು. ದೇಹಶ್ರಮ ಹೆಚ್ಚು. ವ್ಯವಹಾರದಲ್ಲಿ ಆತಂಕ.

ಮಿಥುನ— ಶಾರೀರಕ ಸಾಂಪತ್ತಿಕ ವ್ಯವಹಾರಿಕ ಲಾಭಗಳುಂಟು. ಕೈಗೊಂಡ ಕಾರ್ಯಗಳಲ್ಲಿ ಜಯ.

ಕರ್ಕಾಟಕ— ಶಾರೀರಕ ವ್ಯವಹಾರಿಕ ಸ್ಥಿತಿಗಳು ಕೆಟ್ಟಿರುತ್ತವೆ.

ಸಿಂಹ— ಮಾನಸಿಕ, ಶಾರೀರಕ, ಆರ್ಥಿಕ ಸ್ಥಿತಿಗಳು ಉತ್ತಮವಿರುವುದಿಲ್ಲ.

ಕನ್ಯಾ— ಮನೋಚಿಂತನೆ; ವ್ಯವಹಾರದಲ್ಲಿ ಕಷ್ಟ, ಆರೋಗ್ಯ ಹಾನಿ.

ತುಲ— ಯಶಸ್ಸು. ಗೌರವ. ಪ್ರತಿಷ್ಠೆಗಳನ್ನು ಪಡೆದು ಹರ್ಷಪಡುವಿರಿ.

ವೃಶ್ಚಿಕ— ಧನಲಾಭವೂ ಆರೋಗ್ಯಲಾಭವೂ ಚೆನ್ನಾಗಿರುವುದಾದರೂ, ಖರ್ಚು ಮಾತ್ರ ಸ್ವಲ್ಪಮಟ್ಟಿಗೆ ಹೆಚ್ಚಬಹುದು.

ಧನಸ್ಸು— ಆರ್ಥಿಕಲಾಭವುಂಟು. ಚಿತ್ತದಲ್ಲಿ ಪ್ರಸನ್ನತೆಯುಂಟು. ಶುಭಕಾರ್ಯಗಳಲ್ಲಿ ಇಚ್ಛೆಯುಂಟು.

ಮಕರ — ಖರ್ಚು ಹೆಚ್ಚು ಮನಸ್ಸಿನಲ್ಲಿ ಚಿಂತೆ ಹೆಚ್ಚು ಆರೋಗ್ಯವೂ ಚನ್ನಾಗಿರದು.

ಕುಂಭ — ವ್ಯವಹಾರದಲ್ಲಿ ಹೆಚ್ಚು ಕಷ್ಟಗಳನ್ನು ಎದುರಿಸಬೇಕಾವುದು. ಸಾಲದ್ದಕ್ಕೆ ಖರ್ಚು ಹೆಚ್ಚುತ್ತದೆ. ಆರೋಗ್ಯ ಸ್ಥಿತಿಯು ಸುಮಾರಾಗಿರುತ್ತದೆ.

ಮೀನ — ಶಾರೀರಕ ಸಾಂಪತ್ತಿಕ ವ್ಯವಹಾರಿಕ ಸ್ಥಿತಿಗಳು ಉತ್ತಮವಿರುತ್ತವೆ. ವ್ಯಯವು ಸ್ವಲ್ಪ ಮಟ್ಟಿಗೆ ಹೆಚ್ಚಬಹುದು.

ಕೊಲ್ಲಾಪುರ ಜು 29 — ಸ್ಥಳೀಯ 'ವಿದ್ಯಾವಿಲಾಸ' ಎಂಬ ಮರಾಠಿ ದಿನ ಪತ್ರಿಕೆಯವರು ತೇವಣಿ ಇಟ್ಟಿದ್ದ ರೂ. 1000 ಮುಟ್ಟುಕೋಲು ಹಾಕಲ್ಪಟ್ಟ ತಲ್ಲದೆ ಮತ್ತೆ ರೂ. 4000 ಡಿಪಾಜಿಟ್ ಕಟ್ಟಬೇಕೆಂದು ಸರಕಾರಿ ಆಜ್ಞೆಯಾಗಿದೆ. ಅದರಲ್ಲಿ ಪ್ರಕಟವಾದ ಕೆಲ ಆಕ್ಷೇಪಾರ್ಹ ಲೇಖನಗಳೇ ಕಾರಣ.

ಬೊಂಬಾಯಿ ಜು 29 — ಸಿಕ್, ಜೈನ್ ಅಬ್ರಹ್ಮಣ ಅಥವಾ ಬ್ರಾಹ್ಮಣ ಸಮಾಜ, ಹಿಂದೂಗಳಲ್ಲಿ ಬಹುಪತ್ನಿತ್ವ ನಿರೋಧಿಸುವ ಕಾನೂನು ಸಿದ್ಧಪಡಿಸಲಾಗಿದೆ.

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಫಂಡ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು. ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು

ಶಕ್ತಿಸುಧಾ

ರಕ್ತವೃದ್ಧಿಗೆ, ಧಾತುಪುಷ್ಟಿಗೆ ಸಂಜೀವನ

ನಿಸ್ಸಾರವಾದ, ನತಿಸಿರುವ ದೇಹಕ್ಕೆ ನವಚೈತನ್ಯವನ್ನು ಕೊಡುವ ಅದ್ವಿತೀಯವಾದುದು.

ವಿಳಾಸ — ಶಕ್ತಿಸುಧಾ, 1067 ಚಾಮರಾಜಪುರಂ, ಮೈಸೂರು

SHAKTI SUDHA

For Rich Blood, Strong Nerves & Exuberant Vitality

Edited, Printed and Published by M. S. Krishna Rao, at Satyavadi Press, Chamaraja Agrahar, Mysore

ಜೀವನ ಪಥ

ಪ್ರಪಂಚದ ಅನುಜ್ಞೆಯಿಲ್ಲದೆಯೇ ಮನುಷ್ಯನು ಪ್ರಪಂಚದಲ್ಲಿ ಜನಿಸುತ್ತಾನೆ. ಪುನಃ ತನ್ನ ಬಯಕೆಗೆ ವಿರುದ್ಧವಾಗಿಯೇ ಪ್ರಪಂಚವನ್ನು ಬಿಡುತ್ತಾನೆ. ಅತನ ಉದ್ದೇಶಗಳನ್ನು ಪ್ರಪಂಚವು ಸರಿಯಾಗಿ ಗ್ರಹಿಸಲಾರದು. ಬಾಲ್ಯದಲ್ಲಿ ಅವನೊಬ್ಬ ದೇವತೆ. ಯೌವನದಲ್ಲಿ ಅವನೊಬ್ಬ ಮೂರ್ಖ. ಹೆಂಡರು ಮಕ್ಕಳೊಂದಿಗೆ ಸಂಸಾರ ಮಾಡುತ್ತಿರುವನೊಬ್ಬ ಪೊದ್ದ. ಬ್ರಹ್ಮಚಾರಿಯಾಗಿದ್ದರೆ ಗಂಡಸೇ ಅಲ್ಲ. ಕಾಫೀ ಹೋಟಲುಗಳಲ್ಲಿ ಕಾಲಿಟ್ಟರೆ ಕುಡುಕ. ಇಲ್ಲದಿದ್ದಲ್ಲಿ ಲೋಭಿ. ಅವನಿಗೆ ಮೆದಳಿನ ಶಕ್ತಿ ಇದ್ದಲ್ಲಿ ಬುದ್ಧಿವಂತನೇ ಆಗಲಿ ಮೋಸಗಾರ. ಗುಡಿಗೆ ಹೋದರೆ ಅವನು ವೇಷಧಾರಿ ಭಕ್ತ. ಹೋಗದಿದ್ದರೆ ಪಾಪಿ ದಾತನಾದಲ್ಲಿ ಅದು ಪ್ರಚಾರದ ಸಲುವಾಗಿ. ದಾತನಲ್ಲದಿದ್ದಲ್ಲಿ ಅವನು ಪರಮ ಲೋಭಿ. ನೀಚ. ಪ್ರಪಂಚಕ್ಕೆ ಬಂದಾಗ ಅವನನ್ನು ಪ್ರತಿಯೊಬ್ಬನೂ ಮುತ್ತಿಡುತ್ತಾನೆ. ಸಾಯುವುದಕ್ಕೆ ಮುಂಚೆ ಪ್ರತಿಯೊಬ್ಬನೂ ಅವನನ್ನು ಹೊಡೆಯಹೋಗುತ್ತಾನೆ. ಚಿಕ್ಕಂದಿನಲ್ಲಿಯೇ ಸತ್ತು ಹೋದವನಿಗೆ, ಅವನು ಸಾಯದೇ ಇದ್ದಿದ್ದಲ್ಲಿ ಭವಿಷ್ಯವು ಬಹಳ ಶೋಭಾಯಮಾನವಾಗುತ್ತಿತ್ತು. ವೃದ್ಧಾವಸ್ಥೆಯು ಬರುವರೆಗೆ ಜೀವಿಸಿಕೊಂಡಿದ್ದಲ್ಲಿ ಅವನು ಬಹುಶಃ ವೀಲುನಾಮೆಯನ್ನು ಬರೆದೇ ಇಟ್ಟಿರಬಹುದೆಂದೆಂದುಕೊಳ್ಳುತ್ತಾರೆ. .... (ಓಲಿ)

ಲಾಹೋರ್, ಆ ೧ — ಜಿನ್ನಾ ರವರು ಖಾಲೀ ನೆಲದ ಮೇಲೆ ಆಗಾಗನುಲಗಿಕೊಳ್ಳುತ್ತಿದ್ದಾರೆ. ಜೈಲುವಾಸದ ಕಷ್ಟಗಳಿಗೆ ತಯಾರಾಗುತ್ತಿರುವಂತಿದೆ. ಇದುವರೆವಿಗೂ ಆತ ಬಂದೀಖಾನೆ ವಾಸವನ್ನು ಅನುಭವಿಸಿಲ್ಲ.

ಲಂಡನ್, ಜು 31— ನವೆಂಬರ್‌ನಲ್ಲಿ ಭಾರತದ ಆಹಾರ ಪರಿಸ್ಥಿತಿ ಅತಿ ಭಯಾನಕವಾಗಿರುವುದೆಂದು ಬ್ರಿಟಿಷ್ ಆಹಾರ ಮಂತ್ರಿ ಮಂಡಳದ ಶ್ವೇತಪತ್ರ ತಿಳಿಸಿದೆ.

ವಿಶ್ವಕರ್ನಾಟಕ ಪತ್ರಿಕೆ

ಬೆಂಗಳೂರು ಆ 2 — ಭಾರತ ರಕ್ಷಣಾ ಶಾಸನಾನ್ವಯ 'ವಿಶ್ವಕರ್ನಾಟಕ' ದೈನಿಕವು ಎರಡು ತಿಂಗಳ ಕಾಲ ಪ್ರಕಟಣೆಯಿಂದ ಪ್ರತಿಬಂಧಿಸಲ್ಪಟ್ಟಿದೆ ಜುಲೈ 31 ರಲ್ಲಿ ಪ್ರಕಟವಾದ 'ಅನಾಮಧೇಯ ಪತ್ರ' ಮತ್ತು ಆಗಸ್ಟ್ 1 ರಲ್ಲಿ ಪ್ರಕಟವಾದ 'ಮಾಡಿದ್ದುಣ್ಣೋ ಮಹರಾಯ' ಎಂಬ ಅಗ್ರಲೇಖನಗಳೇ ಇದಕ್ಕೆ ಕಾರಣ. 'ಮಾಡಿದ್ದುಣ್ಣೋ ಮಹರಾಯ' ಲೇಖನದ ಪ್ರತಿಗಳು ಭಾರತ ರಕ್ಷಣಾ ಕಾನೂನಿನ ಪ್ರಕಾರ ಮುಟ್ಟುಗೋಲು ಹಾಕಿಕೊಳ್ಳಲ್ಪಟ್ಟಿದೆ.

ಮದರಾಸು, ಆ 2 — ಎಸ್ ಐ ಆರ್ ರೈಲ್ವೆ ಯೂನಿಯನ್ 26 ಕೇಳಿಕೆಗಳ ವಿನಂತಿಯನ್ನು ಜನರಲ್ ಮೇನೇಜರಿಗೆ ಕೊಟ್ಟಿದ್ದರು. ಆದರಂತೆ ಅನೂಲ ಮಾಡಿಕೊಡದಿದ್ದರೆ ತಾ|| 15 ರಿಂದ 31 ರ ವರೆಗೆ ಮುಷ್ಕರಿಸಿರುವರಂತೆ.

ವಿವಿಧ ವರ್ತಮಾನ

ಬೆಂಗಳೂರು ಆ 2 — ಖಾಸಗೀ ಇಂಟರ್ ಕಾಲೇಜುಗಳಿಗೆ ತಾತ್ಕಾಲಿಕ ಏರ್ಪಾಡಿನಂತೆ 2 ವರ್ಷಕ್ಕೆ ಒಂದಾವರೂ 11 ಸಾವಿರ ಸರ್ಕಾರಿ ಸಹಾಯ ದ್ರವ್ಯ ಸಿಗುವುದು.

ಲಂಡನ್ ಜು 31— ಬ್ರಿಟಿಷ್ ಸೋಲ್ಜರುಗಳು ಪರದೇಸೀ ಹೆಂಗಸರನ್ನು (ಜಪಾನೀ ಸ್ತ್ರೀಯರನ್ನು ಬಿಟ್ಟು) ಮದುವೆಯಾಗಬಹುದೆಂದು ಹೇಳಲಾಗಿದೆ.

ಪೂನಾ ಆ 1 — ಇದುವರೆಗೆ 259 ನಿಮ್ನ ವರ್ಗದ ಸತ್ಯಾಗ್ರಹಿಗಳು ದಸ್ತಗಿರಿಯಾಗಿದ್ದರು. 70 ಮಂದಿ ಕ್ಷಮಾಪಣೆ ಕೇಳಿದೆ ಪ್ರಯುಕ್ತ ಬಿಡುಗಡೆ ಮಾಡಲ್ಪಟ್ಟರು.

ಮೈಸೂರು ಆ 2 — ಮೈಸೂರು ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯಲ್ಲಿ ಶ್ರೀ ಕೆ. ಚಂಗಲರಾಯ ರೆಡ್ಡಿಯವರಿಗೆ ಹೆಚ್ಚು ಓಟುಗಳು ಬಂದು ಅಧ್ಯಕ್ಷ ಪದವಿಗೇರಿದರು.



ಭಾ|| ಸೇನಾಧಿಪತಿಗೆ ಹುಡಿಯಲ್ಪಟ್ಟ ಜಪಾನರ ಫಿರಂಗಿ ಕೊಡಲಾಗುತ್ತಿದೆ.

ಸುಲಭ ಸರಕಾರ

ಎಲ್ಲೆಲ್ಲಿ ನೋಡಿದರೂ ಜವಾಬ್ದಾರಿ ಸರಕಾರ, ರಾಷ್ಟ್ರೀಯ ಸರಕಾರ, ಆ ಸರಕಾರ, ಈ ಸರಕಾರ, ಎಂದು ಹೇಳಿ ಅಸಾಧ್ಯವಾಗಿ ಕೂಗೆಬ್ಬಿಸುತ್ತಾರೆ. ಯಾವ ಸರಕಾರವೇ ಆಗಿದ್ದರೂ ಅದು ಸುಲಭವಾಗಿರುತ್ತದೆಯೇ ಎಂಬುದನ್ನು ನೋಡಬೇಕು. ಕಮ್ಮಿ ಖರ್ಚಿನಲ್ಲಿ ನಡೆಯಬೇಕು. ಅಷ್ಟಾದರೆ ಸರಕಾರದ ಆಡಳಿತವೆಲ್ಲಾ ಬಹು ಸುಲಭವಾಗುತ್ತದೆ.

ಯಾವ ಕಡೆ ಬೇಕಾದರೂ ನೋಡಿರಿ. 'ಸಂಬಳ ಹೆಚ್ಚು ಮಾಡಿರಿ, ತುಟ್ಟಿ ಭತ್ಯ ಕೊಡಿರಿ, ಬೋನಸ್ ಕೊಡಿರಿ, ಹೆಚ್ಚು ದಿನ ರಜಾ ಕೊಡಿರಿ, ಕೆಲಸ ಕಮ್ಮಿ ಕೊಡಿರಿ' ಎಂದು ಎಲ್ಲೆಲ್ಲಿಯೂ ಗಲಾಟೆಗಳು. ಕೇಳಿದುದನ್ನೆಲ್ಲಾ ಕೊಡಬೇಕು ಇಲ್ಲವಾದರೆ ಮುಷ್ಕರ, ಮೆರವಣಿಕೆ, ಸತ್ಯಾಗ್ರಹ, ಕೂಗು, ಗಲಾಟೆ ದೊಂಬಿ, ಗುಂಡು, ಎಲ್ಲವೂ ಒಂದರ ಹಿಂದೆ ಒಂದು ನಡೆದುಹೋಗುವುದು! ಸುಲಭ ಸರಕಾರ ಮಾಡಿಬಿಟ್ಟರೆ ಇದೊಂದು ತಂಟೆಯೇ ಇಲ್ಲ.

'ಇದೇನೋ ಹೊಸ ವಿಧಾನ' ಎಂದು ಯಾರೂ ತಿಳಿದುಕೊಳ್ಳಬೇಕಾಗಿಲ್ಲ. ಹೊಸತು ಯಾವುದೂ ಇಲ್ಲ. ಎಲ್ಲಾ ಹಳೆಯದೇ. ಉತ್ತಮವಾದ ಏರ್ಪಾಟು. ಇದನ್ನು ಕಂಡುಹಿಡಿದವರು ನಮ್ಮ ಮೈಸೂರಿನವರು. ನಮ್ಮ ಸರಕಾರವೇ. ಅದು ಮಾವರಿಗಾಗಿ ಮಾಡಿದ ವಿಧಾನ. ಚೆನ್ನಾಗಿ ನಡೆಯುತ್ತೆ. ಆದ್ದರಿಂದಲೇ ಅದನ್ನು ಖಾಯಂ ಮಾಡಲಾಗಿದೆ. ಇತರ ಇಲಾಖೆಗಳಲ್ಲಿಯೂ ಅದನ್ನೇ ಜಾರಿಗೆ ತರಬೇಕು. ಆದರೆ ಯಾರೂ ಈವರಿಗೆ ಆ ಸೂಚನೆಯನ್ನೇ ಕೊಟ್ಟಿಲ್ಲ. ಆದ್ದರಿಂದ ನಾನೇ ಆ ಸೂಚನೆಯನ್ನು ತಿಳಿಸಬೇಕೆಂದಿದ್ದೇನೆ. ಜತೆಗೆ ನೀವೂ ಅದನ್ನು ತಿಳಿದುಕೊಳ್ಳಿರಿ.

'ಕಂದಾಯ ಮಾಫಿ ಮಾಡಿ' 'ಸ್ಕೂಲು ಕೊಡಿ' 'ಆಸ್ಪತ್ರೆ ಕೊಡಿ' 'ಕೆರೆ ಕಟ್ಟೆ ಮಾಡಿ ಕೊಡಿ' ಎಂದೆಲ್ಲಾ ಕೇಳಬೇಕಾದದ್ದೇ ಇಲ್ಲ, ಸುಲಭ ಸರಕಾರ ಜಾರಿಗೆ ಬಂದರೆ ಎಲ್ಲವೂ ತಾನಾಗಿ ಸುಲಭದಲ್ಲಿಯೇ ನಡೆದುಹೋಗುತ್ತದೆ.

ಸಪ್ತ ಸರಕಾರದವರು ಈ ವಿಧಾನವನ್ನು ಮಾದರಿಗಾಗಿ ಆಯುರ್ವೇದ ಇಲಾಖೆಯಲ್ಲಿ ಜಾರಿಗೆ ತಂದರು. ಹಳ್ಳಿಗಳಲ್ಲೆಲ್ಲಾ ಒಂದೊಂದು ಆಯುರ್ವೇದ ಆಸ್ಪತ್ರೆ ತೆರೆದು ಜನರ ಆರೋಗ್ಯ ರಕ್ಷಣಾ ಕಾರ್ಯವನ್ನು ನಡೆಸಿದರು. ಇದೇನೂ ಕಷ್ಟವೆಂದು ತಿಳಿದುಕೊಳ್ಳಬೇಡಿರಿ, ಬಹು ಸುಲಭವಿದೆ. ಆಯುರ್ವೇದ ಪಂಡಿತರೊಬ್ಬರಿಗೆ ತಿಂಗಳಿಗೆ ಮೂವತ್ತು ನಲವತ್ತು ರೂಪಾಯಿಗಳನ್ನು ಕೊಟ್ಟರಾಯಿತು. ಆ ಊರಿನ ಜನಗಳ ಆರೋಗ್ಯ ರಕ್ಷಣಾ ಕಾರ್ಯವನ್ನೆಲ್ಲಾ ಆತನೇ ವಹಿಸಿಕೊಳ್ಳುತ್ತಾನೆ- ಮೂಲಿಕೆಗಳನ್ನು ತರುವುದು, ಔಷಧಗಳನ್ನು ತಯಾರಿಸುವುದು, ರೋಗಿಗಳನ್ನು ಉಪಚರಿಸುವುದು, ಅವರಿಗೆ ಚಿಕಿತ್ಸೆ ಮಾಡುವುದು, ಇತ್ಯಾದಿ ಎಲ್ಲಾ ಅಧಿಕಾರಗಳೂ ಆತನ ಹಕ್ಕಿನ ದಾಗಿರುತ್ತವೆ. ದಿವಾನಗಿರಿಯಿಂದ ಹಿಡಿದು ಡಾಕ್ಟರ್ ಸಾಹೇಬ್‌ರವರಿಗಿನ ಎಲ್ಲ ಅಧಿಕಾರಗಳೂ ಅವರಿಗೇನೇ ಸೇರಿರುತ್ತವೆ. ಇಂಥಾ ಒಂದು ಸರ್ವಾಧಿಕಾರ ಪಟ್ಟವನ್ನೇ ಆ ಪಂಡಿತರಿಗೆ ನಮ್ಮ ಸರಕಾರದವರು ಕೊಟ್ಟಿರುತ್ತಾರೆ.

ಸುಲಭ ಸರಕಾರ ರಚನಾ ವಿಧಾನ ಸೂತ್ರಗಳಲ್ಲಿ ನಮ್ಮ ಸರಕಾರವು ಮಾದರಿಗಾಗಿ ಆಚರಣೆಗೆ ತಂದು ಯಶಸ್ವಿಯಾಗಿ ನಡೆಸಿಕೊಂಡು ಬಂದುದಿದು.

ಇತರ ಇಲಾಖೆಗಳಲ್ಲಿ ಈ ಸೂತ್ರದಂತೆ ಆಚರಣೆಗೆ ತರುವ ಸಲಹೆಗಳನ್ನು ನಾಳೆ ನೋಡಿರಿ. **"ಮಲ್ಲ"**

ಟಿ. ಎ. ಮಧುರಂ

ಟಿ ಎ. ಮಧುರಮ್ ಸುಕುಮಾರ ಪಿಕ್ಚರ್ಸ್‌ರವರ 'ದೇವದಾಸಿ' ಚಿತ್ರದಲ್ಲಿ ಅಭಿನಯಿಸುವಳೆಂದು ಈ ಮೊದಲು ಪ್ರಕಟವಾಗಿತ್ತಷ್ಟೆ. ಪಕ್ಷಿರಾಜ್‌ದವರ 'ಕನ್ನಿಕಾ' ಇತರ ಎರಡು ಚಿತ್ರಗಳಲ್ಲಿ ಆಕೆ ಅಭಿನಯಿಸುವಳೆಂದು ಇದೀಗ ಗೊತ್ತಾಗಿದೆ. ಟಿ. ಎ. ಮಧುರಂ ಪುನಃ ಚಲಚಿತ್ರಗಳಲ್ಲಿ ಅಭಿನಯಿಸಲು ಕಾರಣವಾದ ವಿಷಯವೆಂದರೆ, ಮದ್ರಾಸು ಹೈಕೋರ್ಟಿನಲ್ಲಾದ ಎಸ್. ಎಸ್. ಕೃಷ್ಣರವರ ಮೇಲಿನ ಖೂನಿ ಮೊಕದ್ದಮೆಯ ತೀರ್ಮಾನದ ಕುರಿತು ಪ್ರೀವಿ ಕೌನ್ಸಿಲಿನಲ್ಲಿ ಅಪೀಲಿಗೆ ಸಮ್ಮತಿ ದೊರೆತಿದೆಯಷ್ಟೆ—ಅದಕ್ಕೆ ಬೇಕಾಗುವ ಖರ್ಚಿನ ಹಣ ಸಂಗ್ರಹಿಸುವದ್ದೇಮಧುರಮಳು ಚಲಚಿತ್ರ ಸೇವೆಗೆ ಇಳಿದುದಾಗಿದೆ. (ಸ್ಫ)

ಬೆಂಗಳೂರು ಜು 29 — ಗಣಿ ಕಂಪೆನಿಯವರಿಗೆ ಮೊದಲು 5 ತಿಂಗಳಿಗೆ 12 ಲಕ್ಷ ರೂ. ಪರಿಹಾರ ಸಮಿತಿ ಕೊಡಲು ತೀರ್ಮಾನಿಸಿದೆ.

ಲಂಡನ್ ಜು 29 — ಬ್ರಿಟನ್ ಮತ್ತು ಫ್ರಾನ್ಸುಗಳಲ್ಲಿ ಫೋಟೊ ನೋಟುಗಳ ಹಾವಳಿ ವಿಪರೀತವಾಗಿದೆ. ಇವು ಎಲ್ಲಿ ತಯಾರಾಗುವುದೆಂಬುದನ್ನು ಪತ್ತೆಹಚ್ಚಲು 8 ಸರಕಾರಗಳು ಪ್ರಯತ್ನಿಸುತ್ತಿವೆ.

ಅತ್ಯಾಚಾರಿಗಳ ಪತ್ತೆಗಾಗಿ

ಜರೂಸೆಲಂ ಜು 30 - ಪ್ಯಾಲಿಸ್ಟೈನ್ ಸರಕಾರದ ಕೇಂದ್ರ ಕಛೇರಿಗಳನ್ನು ಬಾಂಬಿನಿಂದ ಉಡಾಯಿಸಿದ ಪ್ರಕರಣ ಸಂಬಂಧದಲ್ಲಿ, ಟೆಲ್‌ಅವೀವಿನ ಒಂದು ಹೋಟಲಿನಲ್ಲಿ 143 ಮಂದಿ ಯಹೂದ್ಯರು ಬಂಧಿಸಲ್ಪಟ್ಟಿದ್ದಾರೆ. ಈ ಪೈಕಿ 10 ಮಂದಿ ಸ್ತ್ರೀಯರು. ಜರೂಸಲಂನಲ್ಲಿ ನಡೆದ ಈ ಭಾರಿ ಅತ್ಯಾಚಾರಕ್ಕೆ ಸಂಬಂಧಿಸಿದವರೆಲ್ಲರನ್ನೂ ಹಿಡಿದುಹಾಕಲು 16000 ಸೈನಿಕರು ಮುನ್ನುಗ್ಗಿತಾರೆ.

ಮದ್ಯಪಾನ ನಿರೋಧ

ಮದರಾಸು ಜು 31 — ಮದ್ಯಪಾನ ನಿರೋಧವು ಪ್ರಾಂತದಲ್ಲೆಲ್ಲಾ ಜಿಲ್ಲೆಗಳಲ್ಲೂ 3 ವರ್ಷಗಳೊಳಗೆ ಜಾರಿಗೆ ತರಲಾಗುವುದೆಂದು ಶಾಸನ ಸಭೆಯಲ್ಲಿ ಮುಖ್ಯಮಂತ್ರಿಯವರು ಹೇಳಿದರು.

ಇಂಗ್ಲೆಂಡಿನ ಸಂಕಟ

ಕೆನಡಾ ದೇಶವು ಯೂನಿಯನ್ ಜಾಕಿಗೆ ಬದಲಾಗಿ ತನ್ನದೇ ಆದ ಪ್ರತ್ಯೇಕ ಪತಾಕವನ್ನು ಉಪಯೋಗಿಸಲು ಯೋಚಿಸುತ್ತದೆ. ಕೆನಡಾ ಆಹಾರವನ್ನು ಕಳುಹಿಸದೆ ಹೋದಲ್ಲಿ ಇಂಗ್ಲೆಂಡಿನಲ್ಲಿ ಪಥವು ಸಾಗುವದಿಲ್ಲ. ಆದ್ದರಿಂದ ಇಂಗ್ಲೆಂಡು ಕೆನಡಾ ವಿಷಯದಲ್ಲಿ ಯಾವ ಬಗೆಯಲ್ಲಿಯೂ ಆಕ್ಷೇಪಣೆ ಮಾಡಲಾಗದೆ ಇದೆ.

ಅಕ್ಕಿ ರೇಷನ್ ಇಳಿತಾಯ

ಮದರಾಸು ಜು 31 — ಅಕ್ಕಿ ರೇಷನ್ 8 ಔನ್ಸಿಗೆ ಇಳಿಸಲ್ಪಟ್ಟು ಮಿಕ್ಕ 4 ಔನ್ಸು ಗೋಧಿ ಅಥವಾ ಬೇರೆ ಧಾನ್ಯ ಕೊಡುವ ವಿಷಯವನ್ನು ಅಸೆಂಬ್ಲಿಯಲ್ಲಿ ಮುಖ್ಯ ಮಂತ್ರಿಗಳು ವಿವರಿಸಿದರು.

300 ಮಂದಿ ನೀರಿನ ಪಾಲು

ಇಸ್ತಂಬಾಲ್ ಜು 30 — ಅಂಟೋನಿಯರ್ ಡಿಸ್ಟ್ರಕ್ಟಿನಲ್ಲಾದ ನೆರಹೊನಳಿಯಿಂದ 300 ಮಂದಿ ಸತ್ತು ಅನೇಕರು ನಿರಾಶ್ರಿತರಾದರು.

ಲಂಡನ್ ಜು 31 — ಪ್ರಿವಿಕೌನ್ಸಿಲ್ಲಿನಲ್ಲಿಯೂ ಬೂವಾಲ್ ಸನ್ಯಾಸಿ ಸಂಬಂಧದ ಮೊಖದ್ದಮೆ ಅವನ ಅನುಕೂಲವಾಗಿ ತೀರ್ಮಾನವಾಯಿತು.

ಪ್ಯಾರಿಸ್ ಜು 30 — ಶಾಂತಿ ಕರಾರಿನಂತೆ ಇಟಲಿ ರಷ್ಯಾಕ್ಕೆ ಯುದ್ಧ ಪರಿಹಾರಕ್ಕಾಗಿ ರೂ 33,30.00000 ಕೊಡತಕ್ಕದ್ದಾಗಿದೆ. ಮಿಕ್ಕ ಖರತ್ತುಗಳ ವಿವರ ನಾಳೆ ಪ್ರಕಟಿಸಲಾಗುತ್ತೆ.

ವಾಷಿಂಗ್‌ಟನ್ ಜು 30 — ನ್ಯಾಯ ವಿಚಾರಣೆಯಿಲ್ಲದೆ ಬಿಳೀ ಜನರೇ ಮುನ್ನುಗ್ಗಿ ತಪ್ಪಿತಸ್ಥರನ್ನು ಹಿಂಸಿಸುವದನ್ನು ಪ್ರತಿಭಟಿಸಲು ನೀಗ್ರೋ ಜನರು ಪ್ರೊ|| ಟ್ರೂಮನ್ನರ ವೈಟ್ ಹೌಸ್ ಮುಂದೆ ಪಿಕೆಟ್ ನಡೆಸಿದರು.